# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 21 |
| ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 17-08-2026 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕಾಗಿ ದೂರದ ನಗರಗಳಿಗೆ ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ರಾಜ್ಯ ಸರ್ಕಾರದಿಂದ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಲು ಇರುವ ಮಾನದಂಡಗಳೇನು; | ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್ ಗಳನ್ನು ಪ್ರಾರಂಭಿಸಲು ಎಐಸಿಟಿಇ ಮಾರ್ಗಸೂಚಿಗಳನ್ವಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಿಯಮಾನಸಾರ ಅವಶ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಎಐಸಿಟಿಇ, ನವದೆಹಲಿಯವರಿಂದ ಅನುಮೋದನೆ ಪಡೆದು ಪ್ರಾರಂಭಿಸಬೇಕಾಗಿರುತ್ತದೆ.<br><br>ಎಐಸಿಟಿಇ ಪರಿಷ್ಕೃತ ಮಾರ್ಗಸೂಚಿಗಳನ್ವಯ, ಇಂಜಿನಿಯರಿಂಗ್ ಪ್ರೋಗ್ರಾಮ್ ನೀಡುವ ಇಂಜಿನಿಯರಿಂಗ್ ಸಂಸ್ಥೆಗಳನ್ನು ಸ್ಥಾಪಿಸಲು ಪ್ರತೀ ಪ್ರೋಗ್ರಾಮಿನ ಅವಧಿ ಹಾಗೂ ಅನುಮೋದಿತ ಪ್ರವೇಶಾತಿಯಂತೆ ಅವಶ್ಯವಿರುವ Built-Up Area ವನ್ನು ಲೆಕ್ಕಚಾರ ಮಾಡಿ ಅದರ ಆಧಾರದ ಮೇಲೆ ಮತ್ತು ಸದರಿ ಪ್ರದೇಶದಲ್ಲಿ ನಿಗಧಿಯಾಗಿರುವ FSI/FAR ಮಾನದಂಡಗಳನ್ವಯ ಅವಶ್ಯವಿರುವಷ್ಟು ಜಮೀನನ್ನು ಒದಗಿಸಿಕೊಳ್ಳಬೇಕಾಗಿರುತ್ತದೆ. ಅಲ್ಲದೇ ಎಐಸಿಟಿಇ ನವದೆಹಲಿಯವರ 2022-23ನೇ ಸಾಲಿನ ಮಾರ್ಗಸೂಚಿಯನ್ವಯ ಭೋಧಕರು ಮತ್ತು ವಿದ್ಯಾರ್ಥಿಗಳ ಅನುಪಾತ 1:20 ಆಗಿದ್ದು, ಭೋಧಕ: ಭೋಧಕೇತರ: ಆಡಳಿತ ಸಿಬ್ಬಂದಿ ಹುದ್ದೆಗಳನ್ನು 1:1:0.78 ಅನುಪಾತದಂತೆ ಸೃಜಿಸಬೇಕಾಗಿರುತ್ತದೆ.<br><br>ಮುಂದುವರೆದು, ಪ್ರಸ್ತುತ ಚಾಲ್ತಿಯಲ್ಲಿರುವ ಎಐಸಿಟಿಇ ಮಾರ್ಗಸೂಚಿಯನ್ವಯ 2023-24ನೇ ಸಾಲಿನಿಂದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 01 ಉದಯೋನ್ಮುಖ ಕೋರ್ಸ್ ಅನ್ನು ಒಳಗೊಂಡಂತೆ 04 ಕೋರ್ಸ್ ಗಳೊಂದಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. |

ಇ) ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಸಿಂಧನೂರ ತಾಲ್ಲೂಕಿಗೆ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಲು ಅಗತ್ಯವಿರುವ ಮಾನದಂಡಗಳೇನು;

ಈ) ಸರ್ಕಾರದಿಂದ ಸಿಂಧನೂರು ತಾಲ್ಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಯಾವ ಕಾಲಮಿತಿಯೊಳಗೆ ತೆರೆಯಲಾಗುವುದು ?

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸುತ್ತಮುತ್ತ ಈ ಕೆಳಕಂಡ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ:

| ಕ್ರ ಸಂ | ಇಂಜಿನಿಯರಿಂಗ್ ಕಾಲೇಜಿನ ಹೆಸರು | ಸಿಂಧನೂರಿನಿಂದ ಇರುವ ಅಂತರ (ಕಿ.ಮೀ.) | ಪ್ರಸ್ತುತ ಲಭ್ಯವಿರುವ ಕೋರ್ಸ್‌ಗಳು | 2025-26ನೇ ಸಾಲಿನಲ್ಲಿ ಲಭ್ಯವಿರುವ ಪ್ರವೇಶಾತಿ ಸಂಖ್ಯೆ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1. | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ | 50 | 05 | 300 | 152 |
| 2 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು | 90 | 04 | 240 | 180 |
| 3 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ | 100 | 05 | 300 | 246 |

ಮೇಲ್ಕಂಡ ಕಾಲೇಜುಗಳಲ್ಲಿ ಸಿಂಧನೂರು ತಾಲ್ಲೂಕಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡಬಹುದಾಗಿದೆ.

ಈಗಾಗಲೇ ಕರ್ನಾಟಕದಲ್ಲಿ ಸರ್ಕಾರದ ವತಿಯಿಂದ 17 ಇಂಜಿನಿಯರಿಂಗ್ ಕಾಲೇಜು ಹಾಗೂ ಖಾಸಗಿ ವಲಯದ ಸುಮಾರು 205 ಕಾಲೇಜುಗಳಿದ್ದು, ಎಲ್ಲಾ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 87881 ಆಗಿರುತ್ತದೆ.

2025-26ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 1,16,866 ಸೀಟುಗಳು ಲಭ್ಯವಿದ್ದು,(ಖಾಸಗಿ ವಿಶ್ವವಿದ್ಯಾಲಯ ಹೊರತುಪಡಿಸಿ) ಈ ಪೈಕಿ 87881 ಸೀಟುಗಳು ಮಾತ್ರ ಭರ್ತಿಯಾಗಿರುತ್ತವೆ. ಉಳಿಕೆ 28985 ಸೀಟುಗಳು ಭರ್ತಿಯಾಗದೆ ಖಾಲಿ ಇರುತ್ತವೆ.

ಕೆಇಎ ನಡೆಸುವ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಕಾಲೇಜುಗಳ ಪ್ರತಿ ಕೋರ್ಸ್‌ನಲ್ಲಿ ಲಭ್ಯವಿರುವ ಸರ್ಕಾರಿ ಕೋಟದ ಶೇಕಡಾ 70ರಷ್ಟು ಸೀಟುಗಳನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲಾಗುತ್ತದೆ. ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗಿನ ಕಾಲೇಜುಗಳ ಸರ್ಕಾರಿ ಕೋಟಾದ ಶೇಕಡಾ 8ರಷ್ಟು ಸೀಟುಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ

| | | |
|---|---|---|
| | | ಮೀಸಲಿಡಲಾಗಿದೆ.<br><br>ಈ ಕಾರಣಗಳ ಹಿನ್ನೆಲೆಯಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು ಸ್ಥಾಪಿಸುವುದನ್ನು ಸಧ್ಯದ ಪರಿಸ್ಥಿತಿಯಲ್ಲಿ ಕೂಲಂಕುಶವಾಗಿ ಪರೀಶಿಲಸಲಾಗುವುದು |

**ಕಡತ ಸಂಖ್ಯೆ :ಇಡಿ:82:ಹೆಚ್ ಪಿ ಟಿ: 2026**

(ಬಸವರಾಜ ರಾಯರಡ್ಡಿ)
ಉನ್ನತ ಶಿಕ್ಷಣ ಸಚಿವರು